# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ

## Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

ಡಾ. ಪ್ರಸಾದ ಬಿ. ರಾಂಪುರೆ ಎಂ.ಇ.ಪಿಹೆಚ್.ಡಿ
ಕುಲಸಚಿವರು

ದೂರವಾಣಿ ಸಂ: 0831–2498100
ಫ್ಯಾಕ್ಸ ಸಂ: 0831–2405467


ಸಂ. ವಿತಾವಿ/ಬಿಜಿಎಮ್/ಎನ್ಎಸ್.ಎಸ್/ವಿ.ಮ.ರಾ.ಸೇ.ಯೋ.ಪ್ರ/2026–27/ 10 ದಿನಾಂಕ: 07 AUG 2026

## ಸುತ್ತೋಲೆ

ವಿಷಯ : 2024-25 ಮತ್ತು 2025-26ನೇ ಸಾಲಿನ ವಿಶ್ವವಿದ್ಯಾಲಯ ಮಟ್ಟದ ರಾ.ಸೇ.ಯೋ.ಯ ಪ್ರಶಸ್ತಿಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವ ಬಗ್ಗೆ.

ಉಲ್ಲೇಖ : ಮಾನ್ಯ ಕುಲಪತಿಗಳು, ವಿ.ತಾ.ವಿ. ಬೆಳಗಾವಿ ಇವರ ಅನುಮೋದನೆ ಕ್ರಮ ಸಂಖ್ಯೆ: 09 ದಿನಾಂಕ:31.07.2026

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2024-25 ಮತ್ತು 2025-26ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಕಾರ್ಯಕ್ರಮಾಧಿಕಾರಿ ಹಾಗೂ ಅತ್ಯುತ್ತಮ ಸ್ವಯಂ ಸೇವಕ/ಸೇವಕಿಯರಿಗೆ ವಿಶ್ವವಿದ್ಯಾಲಯ ಮಟ್ಟದ ರಾ.ಸೇ.ಯೋ. ಪ್ರಶಸ್ತಿಯನ್ನು ನೀಡಲು ಉದ್ದೇಶಿಲಾಗಿದೆ. ಈ ಪತ್ರದ ಜೊತೆಗೆ ಲಗತ್ತಿಸಿದ ಸಂಬಂಧಪಟ್ಟ ನಮೂನೆಗಳನ್ನು ಭರ್ತಿಮಾಡಿ ದಿನಾಂಕ:05.09.2026ರೊಳಗಾಗಿ ರಾ.ಸೇ.ಯೋ.ಕೋಶ, ವಿ.ತಾ.ವಿ. ಬೆಳಗಾವಿಗೆ ಕಳುಹಿಸಲು ಸೂಚಿಸಲಾಗಿದೆ.

### ಸ್ವಯಂ ಸೇವಕ/ಸೇವಕಿಯರ ಪ್ರಶಸ್ತಿಯ ನಿಬಂಧನೆಗಳು.

1. 2024-25 ಮತ್ತು 2025-26ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿರುವ ಎನ್.ಎಸ್.ಎಸ್. ಸ್ವಯಂ ಸೇವಕ/ಸ್ವಯಂ ಸೇವಕಿಯರು ಮಾತ್ರ ಅರ್ಜಿಗಳನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.
2. 2022-23, 2023-24 ಮತ್ತು 2024-25, 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಪದವಿ ತರಗತಿ ಓದುವ ಸಂದರ್ಭಗಳಲ್ಲಿ ರಾ.ಸೇ.ಯೋ. ಸ್ವಯಂ ಸೇವಕ/ಸ್ವಯಂ ಸೇವಕಿಯರಾಗಿ ಕನಿಷ್ಠ 2 ವರ್ಷ ಸೇವೆ ಸಲ್ಲಿಸಿರಬೇಕು ಹಾಗೂ ಒಟ್ಟು 240 ಗಂಟೆಗಳ ಕಾಲ ಸಕ್ರೀಯವಾಗಿ ಮತ್ತು ಕನಿಷ್ಠ ಒಂದು ವಿಶೇಷ ವಾರ್ಷಿಕ ಶಿಬಿರದಲ್ಲಿ ಕಡ್ಡಾಯವಾಗಿ ಭಾಗವಹಿಸಿರಬೇಕು.
3. ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ರಾ.ಸೇ.ಯೋ ಯುವಜನೋತ್ಸವ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಗಣರಾಜ್ಯೋತ್ಸವ ಪಥಸಂಚಲನ, ಜಿಲ್ಲಾ ಮಟ್ಟದ ಶಿಬಿರ, ಅಂತರ್ ಕಾಲೇಜು ಶಿಬಿರ, ರಕ್ತದಾನ, ನೇತ್ರದಾನ ಪ್ರತಿಜ್ಞೆ, ಸಮುದಾಯ ಸೇವೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವವರಿಗೆ ಆದ್ಯತೆ ನೀಡಲಾಗುವದು. ಈ ಬಗ್ಗೆ ಅರ್ಹತಾ ಪತ್ರಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.
4. ಶೈಕ್ಷಣಿಕ ಸಾಧನೆಯು ಈ ಅವಧಿಯಲ್ಲಿ ಉತ್ತಮವಾಗಿರಬೇಕು. (ರಾ.ಸೇ.ಯೋ ಸೇವಾ ಅವಧಿಯ ಪರೀಕ್ಷಾ ಅಂಕ ಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು)
5. ಮುಂದಾಳುತ್ವ, ಸಾಂಸ್ಕೃತಿಕ, ಸಾಹಿತ್ಯಕವಾಗಿ ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಇರಬಹುದಾದ ಪ್ರತಿಭೆಗಳನ್ನು ಕೂಡ ಗಣನೆಗೆ ತೆಗೆದು ಕೊಳ್ಳಲಾಗುವುದರಿಂದ ಈ ಬಗೆಗಿನ ದೃಢೀಕೃತ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.
6. ಪ್ರತಿ ಘಟಕದಿಂದ ಒಬ್ಬರು ಸ್ವಯಂ ಸೇವಕ ಮತ್ತು ಸ್ವಯಂ ಸೇವಕಿಯರನ್ನು ಮಾತ್ರ (ಮಹಿಳಾ ಸ್ವಯಂ ಸೇವಕರು ಇದ್ದಲ್ಲಿ ಮಾತ್ರ) ಕಾಲೇಜು ಮಟ್ಟದಲ್ಲಿ ಆಯ್ಕೆ ಮಾಡಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡತಕ್ಕದ್ದು.
7. ಪ್ರಸ್ತಾವನೆಯನ್ನು ಡಿಟಿಪಿ ಮಾಡಿಸಿ ಸ್ಪೈರಲ್ ಬೈಂಡಿಗ್ ಅಥವಾ ಪುಸ್ತಕ ರೂಪದಲ್ಲಿ ಸಿದ್ದಪಡಿಸಿ ಸಲ್ಲಿಸುವುದು. ಕ್ರಮವನ್ನು ಅನುಸರಿಸದ ಹಾಗೂ ಅಪೂರ್ಣ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

### ಕಾರ್ಯಕ್ರಮಾಧಿಕಾರಿಗಳ ಪ್ರಶಸ್ತಿಯ ನಿಬಂಧನೆಗಳು.

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ಕನಿಷ್ಠ 3 ವರ್ಷ ಸತತವಾಗಿ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಯಾಗಿ ಸೇವೆ ನಿರ್ವಹಿಸಿರಬೇಕು.

2. ಮಹಾವಿದ್ಯಾಲಯದ ವಿಶೇಷ ವಾರ್ಷಿಕ ಶಿಬಿರವನ್ನು ನಡೆಸಿರಬೇಕು.
3. ಜಿಲ್ಲಾ ಮಟ್ಟದ ಶಿಬಿರ/ಅಂತರ್ ಕಾಲೇಜು ಶಿಬಿರ/ರಾಜ್ಯಮಟ್ಟದ ಶಿಬಿರ/ ರಾಷ್ಟ್ರ ಮಟ್ಟದ ಶಿಬಿರಗಳಲ್ಲಿ ಪಾಲ್ಗೊಂಡಿರುವರಿಗೆ ಆದ್ಯತೆ ನೀಡಲಾಗುವುದು.
4. ಕಾರ್ಯಕ್ರಮ ಅಧಿಕಾರಿಗಳು ಯಾವುದೇ ಕ್ರಿಮಿನಲ್ ಮೊಕದ್ದಮೆಗಳನ್ನು ಹೊಂದಿರಬಾರದು.
5. ರಾ.ಸೇ.ಯೋ ದೈನಂದಿನ ಚಟುವಟಿಕೆ/ ವಿಶೇಷ ವಾರ್ಷಿಕ ಶಿಬಿರಗಳಿಗೆ ಸಂಬಂಧಿಸಿದಂತೆ ಆಯಾ ವರ್ಷದ ವಾರ್ಷಿಕ ವರದಿಗಳನ್ನು ಲೆಕ್ಕಪತ್ರಗಳನ್ನು ನಿಗದಿತ ಅವಧಿಯೊಳಗೆ ಕ್ರಮಬದ್ಧವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರಬೇಕು.
6. ಕಾರ್ಯಕ್ರಮಾಧಿಕಾರಿಗಳು 3 ವರ್ಷಗಳ ಅವಧಿಯಲ್ಲಿ ಕಾಲೇಜಿನ ರಾ.ಸೇ.ಯೋ. ಘಟಕದ ಮುಖಾಂತರ ಸಲ್ಲಿಸಿರುವ ಸೇವೆಯನ್ನು ಮಾತ್ರ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡುವುದರಿಂದ ರಾ.ಸೇ.ಯೋ. ಚಟುವಟಿಕೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳು, ಛಾಯಚಿತ್ರಗಳನ್ನು ಮಾತ್ರ ಪ್ರಸ್ತಾವನೆಯೊಡನೆ ಲಗತ್ತಿಸುವುದು.
7. ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಯಲ್ಲಿ ಪರಿಶೀಲನಾ ಪಟ್ಟಿ (ಚೆಕ್‌ಲಿಸ್ಟ) ಕಡ್ಡಾಯವಾಗಿ ಕಳುಹಿಸಬೇಕು.

ಅತ್ಯುತ್ತಮ ಸ್ವಯಂ ಸೇವಕ/ಸೇವಕಿಯರು ಹಾಗೂ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿ ಹಾಗೂ ಘಟಕಗಳನ್ನು ಅಯ್ಕೆ ಮಾಡಲು ಆಯ್ಕೆ ಸಮಿತಿಗಳಿದ್ದು ಅರ್ಜಿ ಸಲ್ಲಿಸುವವರು ಆ ಸಮಿತಿಗಳ ಮುಂದೆ ಸಂದರ್ಶನಕ್ಕಾಗಿ ಒಂದು ದಿನದ ಮಟ್ಟಿಗೆ ಅವರ ಸ್ವಂತ ಖರ್ಚಿನಲ್ಲಿ ವಿತಾವಿ, ಬೆಳಗಾವಿಗೆ ಬರಬೇಕಾಗಬಹುದು. ರಾಷ್ಟ್ರೀಯ ಸೇವಾ ಯೋಜನೆಯ ವಿವಿಧ ಚಟುವಟಿಕೆಗಳು ಮತ್ತು ಇತರೆ ಶಿಬಿರಗಳಲ್ಲಿ ಪಾಲ್ಗೊಂಡಿರುವಿಕೆ ಹಾಗೂ ಸಂದರ್ಶನ ಸಮಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಸ್ವಯಂ ಸೇವಕ/ಸೇವಕಿಯರುಗಳ ಮತ್ತು ಕಾರ್ಯಕ್ರಮಾಧಿಕಾರಿಗಳ ಅನುಭವ, ತಿಳುವಳಿಕೆ ಮತ್ತು ಎನ್.ಎಸ್.ಎಸ್.ನಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಸಂದರ್ಶಿಸಿ ಅದರ ಆದಾರದ ಮೇಲೆ ಅಭ್ಯರ್ಥಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಆದುದರಿಂದ, ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿ ಹಾಗೂ ಸ್ವಯಂ ಸೇವಕ/ಸೇವಕಿಯರಲ್ಲಿ ಸಾಕಷ್ಟು ಪ್ರಚಾರ ನೀಡಿ ನಿಬಂಧನೆಗಳನ್ನು ಪಾಲಿಸಿ ಪ್ರಸ್ತಾವನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಂತೆ ಸಿದ್ಧಪಡಿಸಿ ಪ್ರಾಂಶುಪಾಲರ ಶಿಫಾರಸ್ಸಿನೊಡನೆ ಈ ಕಛೇರಿಗೆ ದಿನಾಂಕ:05.09.2026ರ ಒಳಗೆ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ. ನಂತರ ಬರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶನ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

**ಅಡಕ:** ಅರ್ಜಿ ನಮೂನೆ

Ravi 07/08/26

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು,

ವಿ.ತಾ.ವಿ. ಬೆಳಗಾವಿಯ ಅಧೀನಕೊಳ್ಳಪಡುವ ಎಲ್ಲಾ ಅಭಿಯಾಂತ್ರಿಕ/

ತಾಂತ್ರಿಕ (ಘಟಕ/ಸಂಯೋಜಿತ/ಸ್ವಾಯತ್ತ) ಮಹಾವಿದ್ಯಾಲಯಗಳು

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿತಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ ವಿತಾವಿ, ಬೆಳಗಾವಿ
3. ಪ್ರಾದೇಶಿಕ ನಿರ್ದೇಶಕರು, ವಿತಾವಿ ಪ್ರಾದೇಶಿಕ ಕೇಂದ್ರ ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಮುದ್ದೇನಹಳ್ಳಿ ಇವರಿಗೆ
4. ನಿರ್ದೇಶಕರು, ITI SMU, ವಿತಾವಿ, ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕಚೇರಿ ಪ್ರತಿ.